ಇ) ಯೋಜನಾ ವರದಿಗೆ ನಿಗಮದ ತಾಂತ್ರಿಕ ಸಲಹಾ ಸಮಿತಿಯು ಒಪ್ಪಿಗೆ ನೀಡಿದ ನಂತರ, ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಿ ಕಾಮಗಾರಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಈ ಯೋಜನೆಯನ್ನು ಪೂರ್ಣಗೊಳಿಸಲು ಸುಮಾರು 3 ವರ್ಷಗಳ ಸಮಯ ಬೇಕಾಗುತ್ತದೆ.

ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂನಲ್ಲಿ ರಾಜಾ ಲಕ್ಕಂಗೌಡ ಜಲಾಶಯದಲ್ಲಿ ಮೈಸೂರು ಮಾದರಿಯ ಬೃಂದಾವನ ನಿರ್ಮಿಸುವುದು

2471 (2775) ಶ್ರೀ ಉಮೇಶ್ ವಿಶ್ವನಾಥಕತ್ತಿ (ಹುಕ್ಕೇರಿ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂನಲ್ಲಿ ರಾಜಾ ಲಕ್ಕಂಗೌಡ ಜಲಾಶಯದಲ್ಲಿ ಮೈಸೂರು ಬೃಂದಾವನ ಮಾದರಿಯ ಹೂದೋಟವನ್ನು ಪ್ರಾರಂಭಿಸುವ ಯೋಜನೆಯು ಸರ್ಕಾರದ ಯಾವ ಹಂತದಲ್ಲಿದೆ.

ಆ. ಉತ್ತರ ಕರ್ನಾಟಕದಲ್ಲಿ ಮೈಸೂರು ಬೃಂದಾವನದ ಮಾದರಿಯಲ್ಲಿ ಈ ಜಲಾಶಯದಲ್ಲಿಯೂ ಬೃಂದಾವನ ನಿರ್ಮಿಸಲು ಸರ್ಕಾರವು ಹಾಕಿಕೊಂಡ ಕಾಲಬದ್ಧ ಕ್ರಮಗಳೇನು ;

ಇ. ಈ ಬೃಂದಾವನದ ಕಾಮಗಾರಿಯನ್ನು ಪ್ರಾರಂಭಿಸಲು ಇರುವ ತೊಂದರೆಯೇನು; ಯಾವಾಗ ಪ್ರಾರಂಭಿಸಲಾಗುವುದು; ಇಲ್ಲವೇ ಈ ಯೋಜನೆಯನ್ನು ಕೈಬಿಡಲಾಗುವುದೇ, ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಳ್ಳುವ ನಿಲುವೇನು?

ಶ್ರೀ ಎಚ್.ಕೆ ಪಾಟೀಲ್ (ಜಲಸಂಪನ್ಮೂಲ ಮಂತ್ರಿ) :—

ಅ), ಆ), ಇ) ದಿನಾಂಕ: 21-04-2001 ರಂದು ನಡೆದ ಅಧಿಕಾರಿಗಳ ಮಟ್ಟದ ಸಭೆಯಲ್ಲಿ, ರಾಜ್ಯದ ಹಲವು ಜಲಾಶಯಗಳನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಅದರಂತೆ ಮೊದಲನೇ ಹಂತದಲ್ಲಿ ಏಳು ಜಲಾಶಯಗಳನ್ನು ಅಭಿವೃಧಿಪಡಿಸಲು ಯೋಜಿಸಲಾಗಿದೆ. ಇದರಲ್ಲಿ ಹಿಡಕಲ್ ಜಲಾಶಯವೂ ಸೇರಿರುತ್ತದೆ. ಈ ಬಗ್ಗೆ ಮುಂದಿನ ಕ್ರಮ ಜರುಗಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ರವರಿಗೆ ಆದೇಶ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸ ವಿದ್ಯುತ್ ಸ್ಟೇಷನ್

2478 (2807) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1999-2000, 2000-2001 ರಲ್ಲಿ ಹೊಸ ವಿದ್ಯುತ್ ಸ್ಟೇಷನ್‌ಗಳು ಎಲ್ಲೆಲ್ಲಿ ಮಂಜೂರಾಗಿವೆ, ಮಾಹಿತಿ ನೀಡುವುದು.

ಆ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನಲ್ಲಿ ಮಂಜೂರಾದ ಹೊಸ ವಿದ್ಯುತ್ ಸ್ಟೇಷನ್ ಕೆಲಸ ಪ್ರಾರಂಭವಾಗದೇ ಇರಲು ಕಾರಣವೇನು;

ಇ) ಇದರಿಂದ ಅಲ್ಲಿಯ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ತ್ವರಿತವಾಗಿ ಈ ಕೆಲಸ ಆಗಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂದನ ರಾಜ್ಯ ಸಚಿವರು) :—

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಈ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಬೇಕಾಗಿರುತ್ತದೆ.

ಇ) ಹೌದು

ಈ) ಸದರೀ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಆದಷ್ಟು ಶೀಘ್ರವಾಗಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗುವುದು ಹಾಗೂ 'ಟರ್ನ್ ಕೀ' ಆಧಾರದಲ್ಲಿ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಸೂಕ್ತ ಕ್ರಮಗಳನ್ನು ಜರುಗಿಸಲಾಗುವುದು.

1999-2000ರ ವರ್ಷದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುವ ಹೊಸ ವಿದ್ಯುತ್ ಸಬ್-ಸ್ಟೇಷನ್ನುಗಳ ವಿವರಗಳು

ಕ್ರಮ ಸಂಖ್ಯೆ	ವಿದ್ಯುತ್ ಸಬ್ ಸ್ಟೇಷನ್ನಿನ ವಿವರ	ತಾಲ್ಲೂಕು	ಜಿಲ್ಲೆ
1	2	3	4
1)	66:11 ಕೆವಿ. ಅಮೃತೂರು	ಕುಣಿಗಲ್	ತುಮಕೂರು
2)	66:11 ಕೆವಿ. ಬೀಮಂಗಳ	ಶಿಡ್ಲಘಟ್ಟ	ಕೋಲಾರ
3)	110:11 ಕೆವಿ. ಹೊನ್ನವಳ್ಳಿ	ತಿಪಟೂರು	ತುಮಕೂರು
4)	66:11 ಕೆವಿ. ಕನಸವಾಡಿ	ದೊಡ್ಡಬಳ್ಳಾಪುರ ಗ್ರಾಮಾಂತರ	ಬೆಂಗಳೂರು

1	2	3	4
5)	66:11 ಕೆವಿ. ರಾಜನುಕುಂಟೆ	ಬೆಂಗಳೂರು (ಉ)	ಬೆಂಗಳೂರು ನಗರ
6)	66:11 ಕೆವಿ. ಬಿ.ಎಂ.ಟಿ.ಸಿ	ಬೆಂಗಳೂರು ನಗರ	ಬೆಂಗಳೂರು ನಗರ
7)	66:11 ಕೆವಿ. ಎಂ.ಇ.ಐ.ಲೇಔಟ್	ಬೆಂಗಳೂರು ನಗರ	--"--
8)	--"-- ನ.ರಾ. ಹಾಲೋನಿ	--"--	--"--
9)	--"-- ಮತ್ತಿಕೆರೆ	--"--	--"--
10)	--"-- ಟೆಲಿಕಾಂ ಲೇಔಟ್	--"--	--"--
11)	--"-- ಅರಕೆರೆ	ಶ್ರೀರಂಗಪಟ್ಟಣ	ಮಂಡ್ಯ
12)	--"-- ಅದ್ದಿಹಳ್ಳಿ	ನಾಗಮಂಗಲ	ಮಂಡ್ಯ
13)	--"-- ಚಂಪಾಪುರ	ಮಂಡ್ಯ	ಮಂಡ್ಯ
14)	110:11 ಕೆವಿ. ಮಧುವನ	ಉಡುಪಿ	ಉಡುಪಿ
15)	66:11 ಕೆವಿ. ಮೇಗಲಾಪುರ	ಮೈಸೂರು	ಮೈಸೂರು
16)	33:11 ಕೆವಿ. ಸಂಪಾಜೆ	ಸೂಳ್ಯ	ದಕ್ಷಿಣ ಕನ್ನಡ
17)	110:11 ಕೆವಿ. ಶಿವನಿ	ತರೀಕೆರೆ	ಚಿಕ್ಕಮಗಳೂರು
18)	66:11 ಕೆವಿ. ಶನಿವಾರ ಸಂತೆ	ಸೋಮವಾರ ಪೇಟೆ	ಕೊಡಗು
19)	110:11 ಕೆವಿ. ಯುಗಟಿ	ಚಿಕ್ಕಮಗಳೂರು	ಚಿಕ್ಕಮಗಳೂರು
20)	66:11 ಕೆವಿ. ಯಸಳೂರು	ಸಕಲೇಶಪುರ	ಹಾಸನ
21)	33:11 ಕೆವಿ. ಬೊಮ್ಮನಹಳ್ಳಿ	ಹಾನಗಲ್	ಹಾವೇರಿ
22)	33:11 ಕೆವಿ. ಬಿಲಗಲಪುರ	ಹಾನಗಲ್	ಹಾವೇರಿ
23)	66:11 ಕೆವಿ. ಚಿಕ್ಕಜಾಜೂರು	ಹೊಳಲ್ಕೆರೆ	ಚಿತ್ರದುರ್ಗ
24)	110:11 ಕೆವಿ. ಡಂಬಳ	ಮುಂಡರಗಿ	ಗದಗ
25)	33:11 ಕೆವಿ. ಗುಡೂರು	ಹುನಗುಂದ	ಬಾಗಲಕೋಟೆ
26)	--"-- ಗಡಿ	ಜಮಖಂಡಿ	--"--
27)	--"-- ಹಿಪ್ಪರಗಿ	--"--	--"--
28)	--"-- ಸಿದ್ದಾಪುರ	--"--	--"--

1	2		3	4
29)	--"--	ಹತ್ತಿಮತ್ತೂರು	ಸವಣೂರು	ಹಾವೇರಿ
30)	66:11 ಕೆವಿ.	ಹಿಂಡಸಗಟ್ಟ	ಹಿರಿಯೂರು	ಚಿತ್ರದುರ್ಗ
31)	33:11 ಕೆವಿ.	ಕುನ್ನೂರು	ಚಿಕ್ಕೋಡಿ	ಬೆಳಗಾಂ
32)	--"--	ಕೊರವಾರ	ಸಿಂಧಗಿ	ಬಿಜಾಪುರ
33)	66:11 ಕೆವಿ.	ಕುಕ್ಕವಾಡ	ದಾವಣಗೆರೆ	ದಾವಣಗೆರೆ
34)	33:11 ಕೆವಿ.	ಹುಳಿಗೋಡು	ಗೋಕಾಕ್	ಬೆಳಗಾಂ
35)	--"--	ತಿಗಡಿ	--"--	--"--
36)	--"--	ಕೋಳಿಗುಡ್ಡ	ರಾಯಬಾಗ್	ಬೆಳಗಾಂ
37)	--"--	ಮಂಟೂರು	--"--	--"--
38)	--"--	ಸುಲ್ತಾನಪುರ	--"--	--"--
39)	66:11 ಕೆವಿ.	ನಂದಗುಡಿ	ಹರಿಹರ	ದಾವಣಗೆರೆ
40)	33:11 ಕೆವಿ.	ನಂದಗಾಂವ್	ಬಿಜಾಪುರ	ಬಿಜಾಪುರ
41)	66:11 ಕೆವಿ.	ರಂಗನಾಥಪುರ	ಹಿರಿಯೂರು	ಚಿತ್ರದುರ್ಗ
42)	33:11 ಕೆವಿ.	ಶಿರೂರು	ಬಾಗಲಕೋಟಿ	ಬಾಗಲಕೋಟಿ
43)	--"--	ಸಿದ್ದರ್	ಕಾರವಾರ	ಉತ್ತರ ಕನ್ನಡ
44)	--"--	ತೆಗ್ಗಿ	ಬೀಳಗಿ	ಬಾಗಲಕೋಟಿ
45)	--"--	ಕೊಡವಲಗ	ಇಂಡಿ	ಬಿಜಾಪುರ
46)	--"--	ಬಗ್ದಾಳ್	ಬೀದರ್	ಬೀದರ್
47)	66:11 ಕೆವಿ.	ಬೆಣ್ಣೆಹಳ್ಳಿ	ಹರಪ್ಪನಹಳ್ಳಿ	ದಾವಣಗೆರೆ
48)	33:11 ಕೆವಿ.	ಬೇವೂರು	ಯಲಬುರ್ಗ	ಕೊಪ್ಪಳ
49)	--"--	ಚಿಮ್ಮನಕೋಡ್	ಬೀದರ್	ಬೀದರ್
50)	66:11 ಕೆವಿ.	ಹಂಪಸಾಗರ್	ಹಗರಿಬೊಮ್ಮನಹಳ್ಳಿ	ಬಳ್ಳಾರಿ
51)	33:11 ಕೆವಿ.	ಜವಹರ್‌ನಗರ	ರಾಯಚೂರು	ರಾಯಚೂರು
52)	110:11 ಕೆವಿ.	ಕೌತಾಲ್	ಮಾನ್ವಿ	--"--
53)	33:11 ಕೆವಿ.	ನಲ್ವರ್	ಚಿತ್ತಾಪುರ	ಗುಲ್ಬರ್ಗಾ
54)	--"--	ತಡ್ಕಲ್	ಅಲಂದ್	--"--

2000-2001ರ ವರ್ಷದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುವ ಹೊಸ ವಿದ್ಯುತ್ ಸಬ್ ಸ್ಟೇಷನ್‌ಗಳ ವಿವರಗಳು

ಕ್ರಮ ಸಂಖ್ಯೆ	ಹೊಸ ವಿದ್ಯುತ್ ಸಬ್ ಸ್ಟೇಷನ್‌ನ ವಿವರಗಳು	ತಾಲ್ಲೂಕು	ಜಿಲ್ಲೆ
1)	66:11 ಕೆವಿ. ಬಾಕವೇಲು	ಬಾಗೇಪಲ್ಲಿ	ಕೋಲಾರ
2)	--"-- ಸೋಮಯಾಜಲು ಪಲ್ಲಿ	ಶ್ರೀನಿವಾಸಪುರ	ಕೋಲಾರ
3)	--"-- ಮಲ್ಲಸಂದ್ರ	ತುಮಕೂರು	ತುಮಕೂರು
4)	220:66 ಕೆವಿ. ಹಾರೋಹಳ್ಳಿ	ಕನಕಪುರ	ಬೆಂಗಳೂರು ಗ್ರಾಮಾಂತರ
5)	66:11 ಕೆವಿ. ವೈ.ಎನ್. ಹೊಸಕೋಟೆ	ಪಾವಗಡ	ತುಮಕೂರು
6)	--"-- ಸೌತ್ ಸಿಟಿ	ಬೆಂಗಳೂರು ನಗರ	ಬೆಂಗಳೂರು ನಗರ
7)	--"-- ಇಸ್ರೋಲೇಔಟ್	--"--	--"--
8)	--"-- ಆಲ್ದೂರು	ಚಿಕ್ಕಮಗಳೂರು	ಚಿಕ್ಕಮಗಳೂರು
9)	110:11 ಕೆವಿ. ಡಿ.ಎಂ. ಕುರ್ಕೆ	ಆರಸೀಕೆರೆ	ಹಾಸನ
10)	110:11 ಕೆವಿ. ಗುರುವಾಯನಕೆರೆ	ಬೆಳ್ತಂಗಡಿ	ದಕ್ಷಿಣ ಕನ್ನಡ
11)	66:11 ಕೆವಿ. ಲಕ್ಕವಳ್ಳಿ	ತರೀಕೆರೆ	ಚಿಕ್ಕಮಗಳೂರು
12)	--"-- ಶಾಂತಿಗ್ರಾಮ	ಹಾಸನ	ಹಾಸನ
13)	110:11 ಕೆವಿ. ಹಬ್ಬಿಕೋಟೆ	ಬೀದರ್	ಬೀದರ್
14)	33:11 ಕೆವಿ. ಶಿರಿಗೆರೆ ಕ್ರಾಸ್	ಶಿರಗುಪ್ಪ	ಬಳ್ಳಾರಿ